## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1131/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಲತಾ | CW: 1 | PW: 1 |
| ಗಂಡನ ಹೆಸರು | : | ಜಗದೀಶ | | |
| ವಯಸ್ಸು | : | 53 | | |
| ವೃತ್ತಿ | : | ಗೃಹಿಣಿ | | |
| ವಾಸಸ್ಥಳ | : | ಚೀಲೂರು | | |

ದಿನಾಂಕಃ 30.10.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ 2 ನನ್ನ ಗಂಡ. ಚಾಸಾ 3 ರಿಂದ 6 ರವರು ಗೊತ್ತು. ದಿಃ 13.11.2019 ರಂದು ನಮ್ಮ ಮನೆಯ ಗೋಡೆ ಕುಸಿದಿದ್ದರಿಂದ ನಾವು ರಿಪೇರಿ ಮಾಡಿಕೊಳ್ಳುತ್ತಿದ್ದಾಗ ಬೆಳಗ್ಗೆ 10.30 ರ ಸಮಯದಲ್ಲಿ ಆರೋಪಿಗಳು ಬಂದು ಸದರಿ ಜಾಗ ನಮಗೆ ಸೇರಿದ್ದು ನಿವ್ಯಾಕೆ ರಿಪೇರಿ ಮಾಡುತ್ತಿದ್ದೀರಾ ಎಂದು ನನಗೆ ಅವಾಚ್ಯ ಶಬ್ದಗಳಿಂದ ಬೈದು, ಅವರ ಕೈಗಳಿಂದ ನನ್ನ ಮೈಕೈಗೆ ಹೊಡೆದರು. 1 ನೇ ಆರೋಪಿಯು ಇಟ್ಟಿಗೆ ಹೆಂಡೆಯಿಂದ ನನ್ನ ಬೆನ್ನಿಗೆ ಹೊಡೆದರು. 2 ನೇ ಆರೋಪಿಯು ಸಲಿಕೆಯಿಂದ ನನ್ನ ಕತ್ತಿಗೆ ಹಿಂಭಾಗಕ್ಕೆ ಹೊಡೆದರು. ಚಾಸಾ 3 ಮತ್ತು 4 ರವರು ಜಗಳ ಬಿಡಿಸಿರುತ್ತಾರೆ. 1 ಮತ್ತು 2 ನೇ ಆರೋಪಿತರು ನನ್ನ ಸೀರೆ ಹಿಡಿದು ಎಳೆದಾಡಿರುತ್ತಾರೆ. ನಂತರ ನನ್ನ ಗಂಡ ಚಾಸಾ 2 ರವರು ಮನೆಗೆ ಬಂದು ಗಲಾಟೆ ವಿಚಾರ ವಿಚಾರಿಸಿ ನನ್ನನ್ನು ಹೊನ್ನಾಳಿಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಪೋಲೀಸ್ ಠಾಣೆಯಲ್ಲಿ ದೂರು ಕೊಡಲು ಮುಂದಾದಾಗ ಊರಿನ ಗ್ರಾಮಸ್ಥರು ಪಂಚಾಯತಿ ಮಾಡುತ್ತೇವೆ ಎಂದು ಹೇಳಿದ್ದು ಆದರೆ ಯಾವುದೇ ಪಂಚಾಯತಿ ಮಾಡದಿದ್ದರಿಂದ ತಡವಾಗಿ ದೂರು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ–</u>

ಆರೋಪಿಗಳು ನನಗೂ ಮತ್ತು ಚಾಸಾ 2 ರವರಿಗೆ ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ದೂರು ಕೊಟ್ಟ ಮೇರೆಗೆ ದಿಃ 17.03.2020 ರಂದು ಪೋಲೀಸರು ಘಟನಾ ಸ್ಥಳಕ್ಕೆ ಬಂದು ನಾನು ಸ್ಥಳ ತೋರಿಸಿದ ಮೇರೆಗೆ ಬೆಳಗ್ಗೆ 11 ರಿಂದ 12 ರ ಸಮಯದಲ್ಲಿ ನನ್ನ, ಚಾಸಾ 5 ಮತ್ತು 6 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿ, ಆರೋಪಿಗಳು ನನ್ನ ಮೇಲೆ ಹಲ್ಲೆಗೆ ಉಪಯೋಗಿಸಿದ ಒಳಹಿಡಿ ಗಾತ್ರದ ಇಟ್ಟಿಗೆ, ಕಬ್ಬಿಣದ ಸಲಾಕೆ ಮತ್ತು ಗಲಾಟೆ ಸಮಯದಲ್ಲಿ ನಾನು ಉಟ್ಟಿದ್ದ ಸೀರೆಯನ್ನು ಅಮಾನತ್ತುಪಡಿಸಿಕೊಂಡು ಮಹಜರ್ ಗೆ ನನ್ನಿಂದ ಸಹಿಗಳನ್ನು ಪಡೆದುಕೊಂಡು ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿ. ಮಹಜರ್ ಸಂದರ್ಭ ಕಚ್ಚಾ ನಕಾಶೆ ತಯಾರಿಸಿ, ಪೋಟೋ ತೆಗೆದಿರುತ್ತಾರೆ ಎಂದರೆ ಸರಿ. ಘಟನೆಗೆ ಸಂಬಂಧಿಸಿದಂತೆ ವಿಸಿ ಮೂಲಕ ಹರಿಹರ ನ್ಯಾಯಾಲಯದ ನ್ಯಾಯಾಧೀಶರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಸಾಕ್ಷಿಯು ನ್ಯಾಯಾಲಯದ ಮುಂದಿವರು ಒಳಹಿಡಿ ಗಾತ್ರದ ಇಟ್ಟಿಗೆ, ಕಬ್ಬಿಣದ ಸಲಾಕೆ ಮತ್ತು ಸೀರೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ 1 ರಿಂದ 3 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸ್ಥಳ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು, ಕಚ್ಚಾ ನಕಾಶೆಯನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯ 3 ಪೋಟೋಗಳನ್ನು ನೋಡಿ ಗುರುತಿಸಿದ್ದು ಪೋಟೋಗಳನ್ನು ನಿಪಿ 4 ರಿಂದ 6 ಎಂದು, ಪೋಟೋಗಳಿಗೆ ಸಂಬಂಧಿಸಿದ ಸಿಡಿಯನ್ನು ನಿಪಿ 7 ಎಂದು ಗುರುತಿಸಲಾಯಿತು. 164 ಹೇಳಿಕೆಯನ್ನು ನಿಪಿ 8 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ– ಆರೋಪಿ ಪರ ಶ್ರೀ.ಹೆಚ್ ಎಂ ಎಸ್ ವಕೀಲರಿಂದಃ–</u>

ಲತಾ. ಜೆ ಹುಲಿಕೇರಿ ಯಾರು ಎಂದರೆ ನಾನೇ. ಆರೋಪಿಗಳು ನನ್ನ ಮೇಲೆ ಗಲಾಟೆ ಮಾಡಿದ್ದಾರೆ ಎನ್ನಲಾದ ದಿನಾಂಕ ಯಾವುದು ಎಂದರೆ 13.11.2019 ಎಂದು ನುಡಿಯುತ್ತಾರೆ. ನಡೆದಿದೆ ಎನ್ನಲಾದ

ಘಟನಾ ದಿನಾಂಕದಂದು ನಾನು ದೂರು ನೀಡಿಲ್ಲ ಎಂದರೆ ಸರಿ. ಗಲಾಟೆಯಾದ ಎಷ್ಟು ದಿನಗಳ ನಂತರ ನಾನು ದೂರು ನೀಡಿರುತ್ತೇನೆ ಎಂದರೆ ಸಾಕ್ಷಿಯು 4 ದಿನಗಳ ನಂತರ ಎಂದು ನುಡಿಯುತ್ತಾರೆ. ನಡೆದಿದೆ ಎನ್ನಲಾದ ಘಟನಾ ಸ್ಥಳ ಯಾರ ಹೆಸರಿನಲ್ಲಿದೆ ಎಂದರೆ ನನ್ನ ಮಾವ ಚಂದ್ರಪ್ಪರವರ ಹೆಸರಿಗಿದೆ ಎಂದು ನುಡಿಯುತ್ತಾರೆ. ಘಟನಾ ಸ್ಥಳವನ್ನು ಸೇರಿದಂತೆ ಇತರೇ ಜಮೀನುಗಳ ಮೇಲೆ ನನ್ನ ಗಂಡ ಚಾಸಾ 2 ರವರು ಹೊನ್ನಾಳಿ ನ್ಯಾಯಾಲಯದಲ್ಲಿ ವಿಭಾಗ ಕೋರಿ ದಾವೆ ಹಾಕಿರುತ್ತಾರೆ ಎಂದರೆ ಸರಿ. ದಿಃ 13.11.2019 ರ ಸಮಯದಲ್ಲಿ ಸದರಿ ಆಸ್ತಿಯ ಮೇಲೆ ಸಿವಿಲ್ ದಾವೆ ನಡೆಯುತ್ತಿತ್ತು ಎಂದರೆ ಸರಿ. ನಮ್ಮ ಮನೆಗೂ 1 ನೇ ಆರೋಪಿಯ ಮನೆಗೂ ಎಷ್ಟು ದೂರ ಎಂದರೆ ½ ಕಿ.ಮೀ. ನಾವು ಅಂಗಡಿ ಮಾಡಿಕೊಂಡಿದ್ದ ಜಾಗದಲ್ಲಿ ಗೋಡೆ ಕಟ್ಟಿ 2 ಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಗೋಡೆ ಕಟ್ಟಿ 2 ರೂಂ ಗಳನ್ನು ಸಹ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ರೂಂ ಕಟ್ಟಲು ಪಂಚಾಯತಿಯಿಂದ ಪರವಾನಗೆ ಪಡೆದುಕೊಂಡಿದ್ದೀರಾ ಎಂದರೆ ಹೌದು. ಸದರಿ ಪರವಾನಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಪೋಲೀಸ್ ನವರಿಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ.

ಮು.ಮಾ 1 ಮತ್ತು 2 ನ್ನು ಪೊಲೀಸರಿಗೆ ನೀವೇ ನೀಡಿದ್ದೀರಾ ಎಂದರೆ ಹೌದು. ಮು.ಮಾ 2 ನ್ನು ಕೆಲಸಗಾರರು ನಮ್ಮ ಮನೆಗೆ ಕೆಲಸ ಮಾಡಲು ಬಂದಾಗ ತಂದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಸಲಿಕೆಯನ್ನು ಕೆಲಸಗಾರರು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಡೆದಿದೆ ಎನ್ನಲಾದ ಘಟನಾ ದಿನಾಂಕದಂದು ಸದರಿ ಕೆಲಸ ನಡೆಯುತ್ತಿರಲಿಲ್ಲ ಎಂದರೆ ಸಾಕ್ಷಿಯು ಸದರಿ ಕೆಲಸ ನಡೆಯುತ್ತಿತ್ತು ಎಂದು ನುಡಿಯುತ್ತಾರೆ. ಸದರಿ ದಿನದಂದು ಎಷ್ಟು ಜನ ಕೆಲಸಗಾರರು ಬಂದಿದ್ದರು ಎಂದರೆ 6 ಜನ. ದಿಃ 13.11.2019 ರಂದು ಆರೋಪಿಗಳು ಘಟನಾ ಸ್ಥಳಕ್ಕೆ ಬಂದು ನನ್ನನ್ನು ಬೈದು, ಹೊಡೆದು, ನನ್ನ ಸೀರೆ ಎಳೆದಾಡಿರುತ್ತಾರೆ ಎಂದು ಸುಳ್ಳು ಹೇಳಿರುತ್ತಾರೆ ಎಂದರೆ ಸರಿಯಲ್ಲ.

ಎಲ್ಲಿಯವರೆಗೂ ಓದಿದ್ದೇನೆ ಎಂದರೆ ಪಿಯುಸಿ. ದೂರನ್ನು ಬರವಣಿಗೆ ರೂಪದಲ್ಲಿ ನೀಡಿದ್ದೀರಾ ಎಂದರೆ ಸಾಕ್ಷಿಯು ಸೈಬರ್ ಕೆಫೆನಲ್ಲಿ ಟೈಪ್ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದೂರನ್ನು ಟೈಪ್ ಮಾಡಿಸಲು ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ನಾನೇ. ನನ್ನ ದೂರಿನಲ್ಲಿ ಹೇಳಿದಂತೆ ಸದರಿ ದಿನಾಂಕದಂದು ಯಾವುದೇ ಗಲಾಟೆ ಆಗಿಲ್ಲದೇ ಇದ್ದರೂ ಸಹ ಸಿವಿಲ್ ದಾವೆಗೆ ಅನುಕೂಲವಾಗಲೀ ಎಂದು ಆರೋಪಿಗಳ ವಿರುದ್ಧ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗಳು ನನ್ನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಹಾಗೂ ನನಗೂ ಮತ್ತು ಚಾಸಾ 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲದೇ ಇದ್ದರೂ ಸಹ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಗೋಡೆ ಕಟ್ಟುತ್ತಿದ್ದೆವು ಎನ್ನಲಾದ ಜಾಗ ಅಂಗಡಿ ಮನೆ ಎಂದರೆ ಸರಿ. ನಾವು ಮತ್ತು ಆರೋಪಿಗಳು ಘಟನಾ ದಿನಾಂಕದಂದು ಒಟ್ಟಿಗೆ ವಾಸವಿದ್ದೆವು ಎಂದರೆ ಹೌದು. ನಾವು ಮತ್ತು ಆರೋಪಿಗಳು ಒಟ್ಟಿಗೆ ವಾಸವಿದ್ದ ಮನೆಯ ಹತ್ತಿರ

ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿ. ನಮ್ಮ ಮತ್ತು ಆರೋಪಿಗಳ ನಡುವೆ ಯಾವುದೇ ಗಲಾಟೆ ಆಗಿಲ್ಲದೇ ಇದ್ದರೂಾ ಸಹ ಅವರಿಗೆ ಕಿರುಕುಳ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮು.ಮಾ 1 ರಿಂದ 3 ಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾವು ಮತ್ತು ಆರೋಪಿಗಳು ಒಟ್ಟಿಗೆ ವಾಸವಿದ್ದ ಮನೆಯ ಹತ್ತಿರ ಗಲಾಟೆ ಆಗಿದೆ ಎಂದು ಸ್ಥಳ ಪಂಚನಾಮೆಯಲ್ಲಿ ಬರೆಸಿದ್ದೀರಾ ಎಂದರೆ ಇಲ್ಲ. ಸ್ಥಳ ಪಂಚನಾಮೆಗೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆಯನ್ನು ಯಾವ ದಿನಾಂಕದಂದು ಮಾಡಿರುತ್ತಾರೆ ಎಂದರೆ ದಿಃ 17.03.2020 ರಂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ದೂರು ಕೊಟ್ಟ ದಿನಾಂಕದಂದು ಸ್ಥಳ ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.